doc-384
T.P-2

(1)

Reg No. G No.155 ಶ್ರೀ 5-10-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರಧಾನಿ ಮತ್ತು ಗೃಹ ಮಂತ್ರಿ ವಜಾ ಆಗಬೇಕಂತೆ

ದಿವ್ಯವಾಣಿ

ಶಾಸಕರು ಪ್ರಭುಗಳಲ್ಲ : ಅವರು ತಮ್ಮನ್ನು ಆರಿಸಿದ ಜನರ ದೇಶದ ಸೇವಕರು
ಮಹಾತ್ಮಾ ಗಾಂಧಿ

●

ಭಾರತದ ಪ್ರಶಂಸೆ

ಸಾಂಟಿಯೋಗೊ— ಎಲ್ಲಾ ರೀತಿಯಲ್ಲಿ ಮಾನವೀಯತೆಯನ್ನು ಒತ್ತಾಯಮಾಡುವ ಮತ್ತು ಸ್ವಾತಂತ್ರ್ಯ, ಶಾಂತಿ, ಪ್ರಜಾಪ್ರಭುತ್ವದ ಆದರ್ಶವನ್ನು ಸ್ಫೂರ್ತಿಗೊಳಿಸುವದು ಭಾರತ ಏಕಮಾತ್ರ ದೊಡ್ಡ ದೇಶವೆಂದು ಅಧ್ಯಕ್ಷ ಫ್ರೇರವರು ಭಾರತದ ಪ್ರಧಾನಿ ಇಂದಿರಾರ ಪ್ರವಾಸದಲ್ಲಿ ಭಾಗವಹಿಸಿರುವ ಪತ್ರಿಕೋದ್ಯೋಗಿಗಳಿಗೆ ತಿಳಿಸಿದರು.

★

ನೂಲು ವಶ

ಮದರಾಸು— ರೂ. 16000 ಬೆಲೆಯ 450 ರೀಲು ರೇಡಿಯೆಂಟ್ ನೂಲನ್ನು ಮಿನಾಂಬಿಕಾ ವಿಮಾನ ನಿಲ್ದಾಣದಲ್ಲಿ ಕಲ್ಕತ್ತಾದಿಂದ ಬಂದ ಇಬ್ಬರು ಭಾರತ ರಾಷ್ಟ್ರೀಯರಿಂದ ವಶಪಡಿಸಿಕೊಳ್ಳಲಾಯಿತು.

★

ಅಪಾರ ಬೆಳ್ಳಿ ವಶ

ಬೊಂಬಾಯಿ— ಗೋಲ್ವಾಡ ಗ್ರಾಮದ ಒಂದು ಭಾವಿಯಲ್ಲಿ ಮುಚ್ಚಿಟ್ಟಿದ್ದ ಲಕ್ಷಾಂತರ ರೂಪಾಯಿ ಬೆಲೆಯ ಬೆಳ್ಳಿಯನ್ನು ಸೆಂಟ್ರಲ್ ಎಕ್ಸೈಜಿನವರು ವಶಪಡಿಸಿಕೊಂಡರು.

★

ಜಾನುವಾರು ದುಸ್ಥಿತಿ

ಜಯಪುರ— ರಾಜಸ್ಥಾನದ ಅನಾವೃಷ್ಟಿ ಪೀಡಿತ 4 ಜಿಲ್ಲೆಗಳಿಂದ 200000 ಜಾನುವಾರು ಮೇವು ನೀರು ಹುಡುಕಿಕೊಂಡು ಹೊರಟಿವೆ

ಪ್ರಧಾನಿ ಮತ್ತು ಗೃಹ ಮಂತ್ರಿ ಡಿಸ್ಮಿಸ್ ಆಗಬೇಕು

ನವದೆಹಲಿ— ದೇಶದಲ್ಲಿ ಶಾಂತಿ ಮತ್ತು ಶಿಸ್ತು ಕೆಡುತ್ತಿರುವ ಪರಿಸ್ಥಿತಿ ಬಗ್ಗೆ ಪಾರ್ಲಿಮೆಂಟು ಸದಸ್ಯರಿಂದ ರುಜುವಾದ ಮನವಿಯನ್ನು ಅಧ್ಯಕ್ಷರಿಗೆ ಕೊಡಲಾಗುವುದೆಂದು ಎಸ್ಸೆಸ್ಪಿ ಕಾರ್ಯದರ್ಶಿ ಶ್ರೀ ರಾಂ ಸೇವಕ ಜಾದವ್ ಹೇಳಿರುವರು— ಪ್ರಧಾನಿ ಮತ್ತು ಗೃಹಮಂತ್ರಿಯವರು ಕೂಡಲೇ ಡಿಸ್‌ಮಿಸ್ ಮಾಡಲ್ಪಡಬೇಕೆಂದೂ ಹೇಳಿದರು.

○

ಸೇವಾದಳದವರು

ಬೆಂಗಳೂರು— ಭಾರತ ಸೇವಾದಳದ ಅಧ್ಯಕ್ಷ ಡಾ॥ ಎಂ ಸಿ ಮೋದಿಯವರು, ರಾಜ್ಯದಲ್ಲಿ ಒಂದು ವರ್ಷ ಪಾದಯಾತ್ರೆ ಹೊರಟಿರುವ ಎಸ್ಸೆಸ್ಸೆಫ್‌ನದ ಮಲ್ಲಿಕಾರ್ಜುನ ಗೌಡರಿಗೆ ದಳದ ಕಾರ್ಯಕರ್ತರು ಸಹಕಾರನೀಡಬೇಕೆಂದು ಒತ್ತಾಯಪೂರ್ವಕ ತಿಳಿಸಿದ್ದಾರೆ.

ಬೆಳ್ಳಿ ವಶ

ಸೂರತ್— ವಾಪಿ ಹತ್ತಿರ ಕಸ್ಟಂಸಿನವರು ರೂ. 5.50 ಲಕ್ಷ ಬೆಲೆಯ ಬೆಳ್ಳಿ ವಶಪಡಿಸಿಕೊಂಡರು – ಒಂದು ಮನೆಯಲ್ಲಿ ರೂ. 22000 ಬೆಲೆಯ ವಿದೇಶಿ ಅರವೆ ವಶಪಡಿಸಿಕೊಂಡರು – ಒಂದು ಹಾಲಿನ ಪಾತ್ರೆಯಲ್ಲಿ ಮುಚ್ಚಿಟ್ಟಿದ್ದ ರೂ. 4000 ಬೆಲೆಯ ಬೆಳ್ಳಿಯೂ ವಶಪಡಿಸಿಕೊಳ್ಳಲಾಯಿತು.

ದಕ್ಷಿಣದಲ್ಲಿ ಪಾರ್ಲಿಮೆಂಟು ಅಧಿವೇಶನಕ್ಕೆ

ರೂ. 1 ಕೋಟಿ

ನವದೆಹಲಿ— ಪಾರ್ಲಿಮೆಂಟಿನ ಒಂದು ಅಧಿವೇಶನಕ್ಕೆ ದಕ್ಷಿಣದಲ್ಲಿ ನಡೆಸಲು ರೂ. 1 ಕೋಟಿ ಖರ್ಚಿದೆ – ಡೆಲ್ಲಿಯಿಂದ ಸದಸ್ಯರು ಮತ್ತು ಅಧಿಕಾರಿಗಳನ್ನು ತ್ರಿವೇಂದ್ರಂ ಅಥವಾ ಬೆಂಗಳೂರಿಗೆ ಕರೆತಂದು ವಾಪಸ್ಸು ಬಿಡುವ ಮತ್ತು ಅವರ ವಾಸದ ಖರ್ಚು ಇದು – ನಿವಾಸದ ಏರ್ಪಾಡಿನ ಬಗ್ಗೆ ಬೇರೆ ಖರ್ಚು

ಉಪಯೋಗಿಸಲ್ಪಟ್ಟ ಅಂಚೇಚೀಟಿ

ಬಿಜಾಪುರ— ಉಪಯೋಗಿಸಲ್ಪಟ್ಟಿದ್ದ ಅಂಚೇಚೀಟಿಗಳನ್ನು ಪಾರ್ಸಲ್ ಮತ್ತು ರಿಜಿಸ್ಟ್ರೇಷನ್ನಿಗೆ ಮತ್ತೆ ಉಪಯೋಗಿಸುತ್ತಿದ್ದ ಬಾಗಲಕೋಟೆ ಸಬ್ ಪೋಸ್ಟ್‌ಮಾಸ್ಟರ್ ಯಲಗಾರ್ಡ್ ರಾಘವೇಂದ್ರ ದೇಸ್ಯಾರಿಗೆ 1 ವರ್ಷ ಕಠಿಣ ಸಜಾ ಮತ್ತು ರೂ. 200 ಜುಲ್ಮಾನೆ ವಿಧಿಸಲಾಯಿತು.

ಪ್ರಮುಖ ಕಾಂಗ್ರೆಸ್ ನಾಯಕರು

ಮೈಸೂರು— ಜಿಲ್ಲೆಯ ಅನಾವೃಷ್ಟಿ ಪ್ರದೇಶಗಳಿಗೆ ಭೇಟಿಕೊಟ್ಟನಂತರ, ನಿನ್ನೆ ರಾತ್ರಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಪ್ಪನವರು ಎಂ ಪಿ ಸಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರೊಡನೆ ಬಂದು, ಟೌನ್ ಹಾಲಿನ ಪ್ರಾರ್ಥನಾ ಸಭೆಯ ನಂತರ ನಾಗಮಂಗಲಕ್ಕೆ ಪ್ರಯಾಣಮಾಡಿದರು.

★ ಮಾರ್ಗೋವಾ— ರಾಷ್ಟ್ರೀಯ ಭಾವೈಕ್ಯದ ಹೊಸ ಪ್ರಯೋಗವನ್ನು ಉದ್ಘಾಟಿಸಲು ಗೋವಾ ವಿದ್ಯಾ ಮಂತ್ರಿ ಶ್ರೀ ಗೋಪಾಲರಾವ್ ಬಂದಾಗ ಒಂದು ಸ್ಕೂಲಿನ ವಿದ್ಯಾರ್ಥಿಗಳು ಅವರನ್ನು 'ಅಡಾಬ್ ಅರಾಜ್" (ಉರ್ದು) 'ವಂದನಂ' (ತಮಿಳು) "ನಮೋಸ್ಕಾರ್" (ಬಂಗಾಳಿ) 'ರಾಂರಾಂ (ಮರಾಟಿ) ಎಂದು, ಸ್ವಾಗತಿಸಿದರು.

★ ವಾಷಿಂಗ್ಟನ್— ಮುಂದಿ ಮೂರು ವರ್ಷಗಳಲ್ಲಿ ವರ್ಷಕ್ಕೆ 160 ಮಿಲಿಯ ಡಾಲರುಗಳನ್ನು ಆಂತರ ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗೆ ಕೊಡುವ ಬಗ್ಗೆ ಶಾಸನ ಆಗಿದೆ.

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು-4.
ಶೇ. 15 ರಿಂದ ಶೇ. 45 ರವರೆವಿಗೆ
ದಸರಾ ಹಬ್ಬದ ಪ್ರಯುಕ್ತ ಇಳಿತಾಯದ ಮಾರಾಟ
ಮೈಸೂರು ಗೌರ್ನಮೆಂಟ್
ಶುದ್ಧ ರೇಷ್ಮೆ ಸೀರೆಗಳು
ಮೈಸೂರು ದಸರಾ ಎಗ್ಜಿಬಿಷನ್ 'ಸಿ' ೩ನೇ ಸ್ಟಾಲಿನಲ್ಲಿ
ಇಳಿತಾಯದ ದರದಲ್ಲಿ ದೊರೆಯುತ್ತದೆ.
ಒಮ್ಮೆ ಭೇಟಿಕೊಡಿರಿ
ಜನರಲ್ ಮ್ಯಾನೇಜರ್,
ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,
ಮೈ ಸೂ ರು-4

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ ಬಾಕುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ಅವರಲ್ಲಿ ಸಾಫ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಆಷ್ಟೆ.

ಹಿಂದೂಗಳ ಆಚಾರ

ಸಂಗ್ರಾಹಕರು— ' ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ನಾರದಃ ॥ ಸರ್ವೇಷಾಮೇವಲೋಕಾನಾಂಗುರುರ್ನಾರಾಯಣೋಹರಿಃ ।
ತಸ್ಯಸಂಪೂಜನಂಕಾಯಂಸರ್ವಪಾಪಹರಂಹಿತತ್ ॥

ವ್ಯಾಸಃ ॥ ಯೋಮೋಹಾದಥವಾಲಸ್ಯಾದಕೃತ್ವಾವಿಷ್ಣುಪೂಜನಂ ।
ಭುಂಕ್ತೇಸಯಾತಿನರಕಾ ಸೂಕರೇಷ್ವಭಿಜಾಯತೇ ॥

ವಿಷ್ಣುಧರ್ಮೋತ್ತರೇ ॥ ವಿಷ್ಣುಪೂಜಾವಿಹೀನಸ್ಯದತ್ತಂಜೇಷ್ಟಂಹುತಂಶ್ರುತಂ ।
ತಪಶ್ಚವ್ಯರ್ಥತಾಂಯಾತಿಸ್ತ್ರೀತಾಲಂಕಾರವದ್ದ್ವಿಜ ॥

ಶಾಂಡಿಲ್ಯಃ ॥ ತ್ರಿಸಂಧ್ಯಂಕಾರಯೇದ್ಯಾವತ್ಪ್ರಣಾಮಂಚೈವಪಾದಯೋಃ ।
ಪುತ್ರಃಪ್ರೇಷ್ಯಸ್ತಥಾಶಿಷ್ಯಃಇತ್ಯೇವಂಜನಿವೇದಯೇತ್ ॥

ಸರ್ವರಿಗೂ ನಾರಾಯಣನೇ ಪರಮಾಚಾರ್ಯನಾದ್ದರಿಂದ ಆವನ ಪೂಜೆಯು ಸರ್ವರಿಂದಲೂ ಅನುಷ್ಠಾನಮಾಡತಕ್ಕದ್ದು. ಆ ಭಗವದಾರಾಧನೆಯಿಂದ ಸಕಲ ಪಾಪಗಳೂ ನಾಶವಾಗುವುವು.

ಯಾವನು ಅಜ್ಞಾನದಿಂದಲೋ, ಸೋಮಾರಿತನದಿಂದಲೋ ವಿಷ್ಣು ಪೂಜೆಯನ್ನು ಮಾಡದೇ, ತಾನು ಭೋಜನ ಮಾಡುವನೋ ಅವನು ನರಕ ಯಾತನೆಯನ್ನು ಹೊಂದಿ, ಹಂದಿ ಜನ್ಮದಲ್ಲಿ ಜನಿಸ್ಪುವನು. ಭಗವದಾರಾಧನೆಯನ್ನು ಮಾಡದೆ ಮನುಷ್ಯನಿಂದ ಮಾಡಲ್ಪಡುವ ತಪಸ್ಸು, ಯಾಗ, ಹೋಮ, ದಾನ, ಅಧ್ಯಯನಾದಿಗಳೆಲ್ಲವೂ, ಶವಾಲಂಕಾರೋಪಾದಿಯಲ್ಲಿ ಎಲ್ಲವೂ ವ್ಯರ್ಥಗಳು.

ಇವನು ಪುತ್ರ, ಇವನು ಶಿಷ್ಯ. ಇವನು ಭೃತ್ಯ ಎಂದು ಸಂಬಂಧಪುರಸ್ಸರವಾಗಿ ಬಾಲಕರುಗಳನ್ನು ಪ್ರಾತಃ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಭಗವತ್ಸನ್ನಿಧಿಯಲ್ಲಿ ನಮಸ್ಕಾರಮ್ಮಾಡಿಸಿ ಹೇಳಬೇಕ್ಕು.

SHAKTI
SUDHA
A Superb Tonic

Protect the Cow



ಗೋರಕ್ಷಣೆ ಮತ್ತು ಪಾಲನೆಯಲ್ಲಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ ಜನಪ್ರಿಯತೆ 4ನೇ ವಾರ
ವೈಭವಪೂರ್ಣ ಆರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಲಿಯಗಟ್ಟಲೆ ಕೊಸಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬ್ಲಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಿತಿಕಲಾ, ಮಹಮೂದ್

ಆಪೇರ— ಜನಪ್ರಿಯ 6 ನೇ ವಾರ
ಚಿತ್ತಾಕರ್ಷಕ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮನ್ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding
Lakshminarasimha Press
Sivarampet, Mysore

ಆಶೋಕ ಏಜೆನ್ಸೀಸ್
ಬ್ಲಾನ್ಸ್‌ಡೋರ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4